**<u>ಪ್ರಧಾನ ಸಿವಿಲ್ ಮತ್ತು  ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>**

**ಸಿಸಿ  ನಂ. 91/2023**

| | | | |
|---|---|---|---|
| **ಹೆಸರು** | **:** | **ಶಶಿಕುಮಾರ** | **ಚಾ.ಸಾ. 2** |
| **ತಂದೆಯ  ಹೆಸರು** | **:** | **ಸುಭಾಷ** | **ಪ್ರಾ.ಸಾ. 1** |
| **ವಯಸ್ಸು** | **:** | **28 ವರ್ಷ** | **ದಿನಾಂಕಃ 02-07-2024** |
| **ಉದ್ಯೋಗ** | **:** | **ವೈನ ಶಾಪನಲ್ಲಿ ಕೆಲಸ** | |
| **ವಾಸಸ್ಥಳ** | **:** | **ಚಿಂಚೋಳಿ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ಚಾಸಾ-1, ಚಾಸಾ-3 ರಿಂದ 5 ರವರು ನನಗೆ ಗೊತ್ತಿಲ್ಲ.

ಈಗ ನೋಡುತ್ತಿರುವ ದಾಖಲೆಗಳಲ್ಲಿ ನನ್ನ ಸಹಿಗಳು ಇದೆ. ಸದರಿ ದಾಖಲೆಗಳನ್ನು ನಿಪಿ-1 ಮತ್ತು ನಿಪಿ-2 ಎಂದು ಮತ್ತು ಅದರಲ್ಲಿರುವ ನನ್ನ ಸಹಿಗಳನ್ನು ನಿಪಿ-1(ಎ) ಮತ್ತು ನಿಪಿ-2(ಎ) ಎಂದು ಗುರುತಿಸಲಾಯಿತು.

ಈಗ್ಗೆ 2-3 ವರ್ಷಗಳ ಹಿಂದೆ ಅಬಕಾರಿ ಕಚೇರಿಯಲ್ಲಿ ಅಲ್ಲಿದ್ದ ಒಬ್ಬ ಅಧಿಕಾರಿಗಳು ಕರೆದು ಸಹಿ ಮಾಡು ಎಂದಿದ್ದಕ್ಕೆ ಸಹಿ ಮಾಡಿದ್ದೇನೆ. ನಿಪಿ-1 ಮತ್ತು 2 ರ ಸಂಗತಿಗಳನ್ನು ನಾನು ಓದಿಲ್ಲ. ಪೋಲಿಸರು ನನ್ನ ಸಮಕ್ಷಮ ಯಾವುದೇ ವಸ್ತು ಜಪ್ತು ಮಾಡಿಲ್ಲ ಮತ್ತು ಯಾವುದೇ ಸ್ಥಳಕ್ಕೆ ಕರೆದುಕೊಂಡು ಹೋಗಿಲ್ಲ.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಸಲ್ಲಿಸಿರುವ ಪಂಚನಾಮೆಗೆ ಈ ಸಾಕ್ಷಿ ಸಂಪೂರ್ಣ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**<u>ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದ-</u>**

ದಿನಾಂಕಃ 23-02-2022 ರಂದು ಮದ್ಯಾಹ್ನ 2-00 ಗಂಟೆ ಸುಮಾರಿಗೆ ಚಿಂಚೋಳಿ ಪಟ್ಟಣದ ಗಾಂಧಿ ಸರ್ಕಲ ಹತ್ತಿರ ನಿಂತಾಗ ಕಂದಾಯ ಅಧಿಕಾರಿಗಳು ನನ್ನ ಪರಿಚಯ ಪಡೆದುಕೊಂಡು ಚಂದಾಪುರ ಗ್ರಾಮದಲ್ಲಿ ದಾಳಿ ಮಾಡವುದಿದೆ ಎಂದು ಪಂಚರಾಗಲು ಕೇಳಿಕೊಂಡರು ಎಂದರೆ

ಸರಿಯಲ್ಲ. ಆಗ ಸರಕಾರಿ ವಾಹನದಲ್ಲಿ ನಾನು ಮತ್ತು ಚಾಸಾ-3 ರವರು ಹೋಗಿ ಭಾತ್ಮಿ ಬಂದ ಸ್ಥಳಕ್ಕೆ ಹೋದಾಗ ಸದರಿ ಮನೆಯನ್ನು ಒಬ್ಬ ಮಹಿಳೆ ಗಾಬರಿಯಿಂದ ಓಡಿಹೋದಳು ಎಂದರೆ ಸರಿಯಲ್ಲ. ಆಗ ಅನುಮಾನಗೊಂಡು ಅಧಿಕಾರಿಗಳು ಅಕ್ಕಪಕ್ಕದವರಿಗೆ ವಿಚಾರಿಸಿದಾಗ ಸದರಿ ಮಹಿಳೆಯ ಹೆಸರು ಬಕ್ಕಮ್ಮ ಗಂಡ ಹನುಮಂತ ಎಂದು ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಮನೆಯನ್ನು ಶೋಧನೆ ಮಾಡಿದಾಗ ಅಲ್ಲಿ 20 ಲೀಟರ ಸಾಮರ್ಥ್ಯವುಳ್ಳ 2 ಬಿಳಿ ಬಣ್ಣದ ಬಕೇಟುಗಳು ಕಂಡುಬಂದಿದ್ದು ಅವುಗಳಲ್ಲಿ 40 ಲೀಟರನಷ್ಟು ಕಲಬೆರಕೆ ಸೇಂದಿ ದೊರೆತಿರುತ್ತದೆ ಎಂದರೆ ಸರಿಯಲ್ಲ. ನಂತರ ಅಧಿಕಾರಿಗಳು ನನ್ನ ಸಮಕ್ಷಮ ಸದರಿ ಕಲಬೆರಕೆ ಸೇಂದಿಯನ್ನು ಜಪ್ತಿ ಮಾಡಿ ಮದ್ಯಾಹ್ನ 2-30 ರಿಂದ 3-30 ರವರೆಗೆ ಜಪ್ತಿ ಪಂಚನಮೆಯನ್ನು ಬರೆದಿರುತ್ತಾರೆ ಎಂದರೆ ಸರಿಯಲ್ಲ. ಎಲ್ಲಾ ಗೊತ್ತಿದ್ದರೂ ಆರೋಪಿಯ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಎನ್.ಸಿ.ಹೆಚ್. ವಕೀಲರಿಂದಃ- ಇಲ್ಲಾ.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**
**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**